ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1586
ಸದಸ್ಯರ ಹೆಸರು : ಶ್ರೀ ಗೋವಿಂದ ರಾಜು.
ಉತ್ತರಿಸಬೇಕಾದ ದಿನಾಂಕ : 24-09-2021
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ಇದರಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕೆ ರಾಜ್ಯ ಮಟ್ಟದಲ್ಲಿ ಆಯ್ಕೆ ಪಟ್ಟಿ ತಯಾರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಹಾಗಿದ್ದಲ್ಲಿ, ಈ ಹಿಂದೆ ನಡೆಸಲಾಗುತ್ತಿದಂತೆ ಜಿಲ್ಲಾ ಮಟ್ಟದಲ್ಲಿ ನಡೆಸದಿರಲು ಕಾರಣವೇನು; ಇದರಿಂದ ಆಯಾ ಜಿಲ್ಲೆಗಳ ಮಕ್ಕಳಿಗೆ ಅನ್ಯಾಯವಾಗುವುದಿಲ್ಲವೇ ; (ವಿವರ ನೀಡುವುದು)	ವಿವರಗಳನ್ನು ಅನುಬಂಧದಲ್ಲಿ ನೀಡಿದೆ.
ಇ)	ಹಾಗಿದ್ದಲ್ಲಿ, ತಾಲ್ಲೂಕು ಹಾಗೂ ವಿಧಾನ ಸಭಾ ಕ್ಷೇತ್ರವಾರು ವಸತಿ ಶಾಲೆಗಳಲ್ಲಿ ತೆರೆದಿದ್ದರ ಉದ್ದೇಶವಾದರೂ ಏನು; ರಾಜ್ಯ ಮಟ್ಟದಲ್ಲಿ ಆಯ್ಕೆ ಶ್ರೇಣಿ ಪರಿಗಣಿಸಿ ಪಟ್ಟಿ ತಯಾರಿಸುವುದರಿಂದ ಸ್ಥಳೀಯ ಜಿಲ್ಲೆಯ ಮಕ್ಕಳಿಗೆ ಸಿಗಬೇಕಾದ ಸ್ಥಾನ ಬೇರೆ ಬೇರೆ ಜಿಲ್ಲೆಗಳ ಮಕ್ಕಳಿಗೆ ಸಿಗುತ್ತಿದ್ದು ಸ್ಥಳೀಯ ಮಕ್ಕಳ ಪ್ರವೇಶ ವಂಚಿತರಾಗುತ್ತಿರುವುದಕ್ಕೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು;	
ಈ)	6ನೇ ತರಗತಿ ಪ್ರವೇಶವನ್ನು ರಾಜ್ಯ ಮಟ್ಟದಲ್ಲಿ ಆಯ್ಕೆ ಪಟ್ಟಿ ತಯಾರಿಸಿರಲು ಸಚಿವ ಸಂಪುಟದ ಅನುಮೋದನೆಯಾಗಿದೆಯೇ? (ವಿವರ ನೀಡುವುದು)	ಇಲ್ಲ. ಆದೇಶ ಸಂಖ್ಯೆ: ಸಕಇ 94 ಮೋದೇಶಾ 2020, ದಿನಾಂಕ: 19.06.2021 ರನ್ವಯ ಅರ್ಹ ವಿದ್ಯಾರ್ಥಿಗಳಿಗೆ 6ನೇ ತರಗತಿ ಪ್ರವೇಶ ಪರೀಕ್ಷೆ ನಡೆಸಿ ಸೀಟು ಹಂಚಿಕೆ ಮಾಡಿ ಅರ್ಹತೆಯನುಸಾರ ಆಯ್ಕೆ ಮಾಡಿ ಸೀಟು ಹಂಚಿಕೆ ಮಾಡಲಾಗುತ್ತಿದೆ.

ಸಂಖ್ಯೆ: ಸಕಇ 411 ಮೊದೇಶಾ 2021

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಅನುಬಂಧ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ 800 ವಸತಿ ಶಾಲೆಗಳಲ್ಲಿ ಪ್ರಾರಂಭಿಕ ತರಗತಿಯಾದ 6ನೇ ತರಗತಿಗೆ 40,540 ಸೀಟುಗಳಿದ್ದು, ಪ್ರವೇಶ ಪರೀಕ್ಷೆ ಹಾಗೂ ಆನ್‌ಲೈನ್ ಸೀಟು ಹಂಚಿಕೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನಡೆಸಿ ವಿದ್ಯಾರ್ಥಿಗಳನ್ನು ವಸತಿ ಶಾಲೆಗಳಿಗೆ ಆಯ್ಕೆ ಮಾಡಲಾಗುತ್ತಿದೆ.

ಪ್ರವೇಶ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳ ಆಧಾರದ ಮೇಲೆ ರಾಜ್ಯ ಮಟ್ಟದ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಿ, ಆನ್‌ಲೈನ್ ಸೀಟು ಹಂಚಿಕೆಗೆ ಈ ಕೆಳಕಂಡ ಅಂಶಗಳನ್ನು ಪರಿಗಣಿಸಲಾಗುತ್ತದೆ.

1. ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳು(ಮೆರಿಟ್),
2. ಅಭ್ಯರ್ಥಿಯು ಸೇರ ಬಯಸುವ ವಸತಿ ಶಾಲೆಗಳ ಶಾಲಾವಾರು ಆದ್ಯತೆ
3. ಅಭ್ಯರ್ಥಿಗೆ ಸರ್ಕಾರವು ನಿಗದಿಪಡಿಸಿದ ಮೀಸಲಾತಿ

ಮೇಲ್ಕಂಡ ಅಂಶಗಳ ಆಧಾರದ ಮೇಲೆ seat matrix ಸಿದ್ಧಪಡಿಸಿ ಗಣಕೀಕೃತ ಸ್ವಯಂ ಆಯ್ಕೆ (computerized auto selection) ಮೂಲಕ ಪಾರದರ್ಶಕವಾಗಿ ಈ ಕೆಳಕಂಡಂತೆ ಸೀಟು ಹಂಚಿಕೆ ಮಾಡಲಾಗುತ್ತಿದೆ.

1) ಮೊದಲಿಗೆ **ಆಯಾ ಜಿಲ್ಲೆಯ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಿ,** ಸರ್ಕಾರದ ಆದೇಶ ಸಂಖ್ಯೆ:ಸಕಇ 94 ಮೊದೇಶಾ 2020 ಬೆಂಗಳೂರು, ದಿನಾಂಕ 19.06.2021 ರನ್ವಯ ಒಂದು ತಾಲ್ಲೂಕಿನ ವಸತಿ ಶಾಲೆಗಳಿಗೆ ಅದೇ ತಾಲ್ಲೂಕಿನ ಮೂಲ ನಿವಾಸಿಯಾದ ವಿದ್ಯಾರ್ಥಿಗಳಿಗೆ ಶೇ.25% ರಷ್ಟು ಸ್ಥಾನವನ್ನು ಹಂಚಿಕೆಮಾಡಿ, ಉಳಿದ ಸ್ಥಾನಗಳಿಗೆ ನಿಯಮಾನುಸಾರ ಅದೇ ತಾಲ್ಲೂಕಿನ ಮತ್ತು ಅದೇ ಜಿಲ್ಲೆಯ ಬೇರೆ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಮಾತ್ರ ಸೀಟು ಹಂಚಿಕೆ ಮಾಡಲಾಗುವುದು.
2) ಮೊದಲನೇ ಸುತ್ತಿನಲ್ಲಿ ಹಂಚಿಕೆಯಾಗದೆ ಖಾಲಿ ಉಳಿದ ಸೀಟುಗಳು ಹಾಗೂ ಮೊದಲನೇ ಸುತ್ತಿನಲ್ಲಿ ಹಂಚಿಕೆ ಪಡೆದು ಶಾಲೆಗೆ ದಾಖಲಾಗದೇ ಉಳಿದ ಸೀಟುಗಳನ್ನು ಕ್ರೂಢೀಕರಿಸಿ, ಮೊದಲನೇ ಸುತ್ತಿನಲ್ಲಿ ಭಾಗವಹಿಸಿ ಸೀಟು ಹಂಚಿಕೆಯಾಗದೇ ಇರುವ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಿ **2ನೇ ಸುತ್ತಿನ ಜಿಲ್ಲಾ ಮಟ್ಟದ ಆನ್‌ಲೈನ್ ಸೀಟು ಹಂಚಿಕೆಯನ್ನು** ಅಭ್ಯರ್ಥಿಗಳು ಪಡೆದ ಮೆರಿಟ್, ಅಭ್ಯರ್ಥಿಯು ನೀಡಿದ ಶಾಲಾವಾರು ಆದ್ಯತೆ ಹಾಗೂ ಅಭ್ಯರ್ಥಿಗೆ ಸರ್ಕಾರವು ನಿಗಧಿಪಡಿಸಿದ ಮೀಸಲಾತಿಗನುಗುಣವಾಗಿ ಸೀಟು ಹಂಚಿಕೆ ಮಾಡಲಾಗುತ್ತದೆ.
3) ಎರಡನೇ ಸುತ್ತಿನಲ್ಲಿ ಹಂಚಿಕೆಯಾಗದೆ ಖಾಲಿ ಉಳಿದ ಸೀಟುಗಳು ಹಾಗೂ ಎರಡನೇ ಸುತ್ತಿನಲ್ಲಿ ಹಂಚಿಕೆ ಪಡೆದು ಶಾಲೆಗೆ ದಾಖಲಾಗದೇ ಉಳಿದ ಸೀಟುಗಳನ್ನು ಕ್ರೂಢೀಕರಿಸಿ, ಮೊದಲ ಎರಡು ಸುತ್ತಿನಲ್ಲಿ ಭಾಗವಹಿಸಿ ಸೀಟು ಹಂಚಿಕೆಯಾಗದೇ ಇರುವ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಿ **3ನೇ ಸುತ್ತಿನ ಜಿಲ್ಲಾ ಮಟ್ಟದ ಆನ್‌ಲೈನ್ ಸೀಟು ಹಂಚಿಕೆಯನ್ನು** ಅಭ್ಯರ್ಥಿಗಳು ಪಡೆದ ಮೆರಿಟ್, ಅಭ್ಯರ್ಥಿಯು ನೀಡಿದ ಶಾಲಾವಾರು ಆದ್ಯತೆ ಹಾಗೂ ಅಭ್ಯರ್ಥಿಗೆ ಸರ್ಕಾರವು ನಿಗಧಿಪಡಿಸಿದ ಮೀಸಲಾತಿಗನುಗುಣವಾಗಿ ಸೀಟು ಹಂಚಿಕೆ ಮಾಡಲಾಗುತ್ತದೆ.

   ಹೀಗೆ ಮೊದಲ ಮೂರು ಸುತ್ತಿನಲ್ಲಿ ಆಯಾ ಜಿಲ್ಲೆಯೊಳಗೆಯೇ ಶಾಲಾ ಹಂಚಿಕೆ ನಡೆಸಲಾಗುತ್ತದೆ. ಈ ಹಂತಗಳಲ್ಲಿ ಅತಿ ಹೆಚ್ಚಿನ ಸೀಟುಗಳು ಜಿಲ್ಲಾ ವ್ಯಾಪ್ತಿಯೊಳಗಡೆಯೇ ಹಂಚಿಕೆಯಾಗುತ್ತದೆ.
4) ಆದರೆ ನಿಗದಿತ ಮೀಸಲಾತಿಯ ಸೀಟುಗಳು ಆ ಜಿಲ್ಲೆಯಲ್ಲಿ ಭರ್ತಿಯಾದಲ್ಲಿ ನಾಲ್ಕನೇ ಸುತ್ತಿನಲ್ಲಿ ಸದರಿ ಮೀಸಲಾತಿಯ ಸೀಟುಗಳು ಇತರೆ ಜಿಲ್ಲೆಯಲ್ಲಿ ಖಾಲಿಯಿದ್ದಲ್ಲಿ ಮಾತ್ರ ಆಯಾ ವರ್ಗಗಳಿಗೆ ಮೀಸಲಾಗಿರುವ ಸೀಟುಗಳಿಗೆ ಅದೇ ವರ್ಗದ ಅರ್ಹ ವಿದ್ಯಾರ್ಥಿಗಳಿಗೆ ಅವಕಾಶ ನೀಡಲು ಸದರಿ ವಿದ್ಯಾರ್ಥಿಗಳು ಆದ್ಯತೆ ನೀಡಿದ್ದಲ್ಲಿ /ಇಚ್ಛಿಸಿದಲ್ಲಿ ಜಿಲ್ಲಾ ಹಂತದ 3ನೇ ಸುತ್ತಿನಲ್ಲಿ ಹಂಚಿಕೆಯಾಗದೆ ಖಾಲಿ ಉಳಿದ ಸೀಟುಗಳು ಹಾಗೂ 3ನೇ ಸುತ್ತಿನಲ್ಲಿ ಹಂಚಿಕೆ ಪಡೆದು ಶಾಲೆಗೆ ದಾಖಲಾಗದೇ ಉಳಿದ ಸೀಟುಗಳನ್ನು ಕ್ರೋಢೀಕರಿಸಿ, 4ನೇ ಸುತ್ತಿನ ರಾಜ್ಯ ಮಟ್ಟದ ಸೀಟು ಹಂಚಿಕೆ ಪ್ರಕ್ರಿಯೆಯನ್ನು ನಡೆಸಲಾಗುತ್ತಿದೆ.

ಈ ಪ್ರಕ್ರಿಯೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದಿರುವ ಆಯಾ ವರ್ಗದ ಅರ್ಹ ವಿದ್ಯಾರ್ಥಿಗಳಿಗೆ ತಮ್ಮ ಆದ್ಯತೆ, ಮೀಸಲಾತಿಗನುಗಣವಾಗಿ ಇಚ್ಛಿಸಿದ ಶಾಲೆಗಳಿಗೆ ಪ್ರವೇಶಕ್ಕೆ ಅವಕಾಶ ದೊರೆಯುತ್ತಿದೆ. ತದನಂತರ ವಿದ್ಯಾರ್ಥಿಗಳ ಅಂಕಗಳು, ಶಾಲಾ ಆದ್ಯತೆ ಮತ್ತು ಮೀಸಲಾತಿಗನುಸಾರ ಶಾಲೆಗಳ ಹಂಚಿಕೆ ಪ್ರಕ್ರಿಯೆ ಅತ್ಯಂತ ಪಾರದರ್ಶಕವಾಗಿ ನಡೆಯುತ್ತಿದೆ.

***